ಇ) ಜಿಲ್ಲಾಪರಿಷತ್‌ನಲ್ಲಿ ಅನುದಾನದ ಕೊರತೆಯಿಂದ ಈ ಕಾಮಗಾರಿಯನ್ನು ಆಯವ್ಯಯ ಪಟ್ಟಿಯಲ್ಲಿ ಸೇರಿಸಲು ಇಲ್ಲಿಯವರೆಗೆ ಅವಕಾಶ ಆಗಿರುವುದಿಲ್ಲ.

ಈ) ಈ ಕಾಮಗಾರಿಯನ್ನು ಆದ್ಯತೆಯ ಮೇಲೆ ಮುಂಬರುವ ಸಾಲಿನ ಆಯವ್ಯಯದಲ್ಲಿ ಸೇರಿಸಲು ಕ್ರಮ ತೆಗೆದುಕೊಳ್ಳುವಂತೆ ಜಿಲ್ಲಾ ಪರಿಷತ್‌ನವರಿಗ ಸೂಕ್ತ ನಿರ್ದೇಶನ ನೀಡಲಾಗುವುದು.

ಕರ್ನಾಟಕ ರಾಜ್ಯದ ಎನ್. ಸಿ. ಸಿ. ಕೆಡೆಟ್‌ಗಳು

೧೪೩೧ (೨೨೬೩) ಶ್ರೀ ಪಿ. ಬಸವರಾಜ್ (ಬ್ರಹ್ಮಾವರ):- ಮಾನ್ಯ ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಕರ್ನಾಟಕ ರಾಜ್ಯದ ಎನ್. ಸಿ. ಸಿ. ಕೆಡೆಟ್‌ಗಳು ದೇಶದ ಗಣರಾಜ್ಯೋತ್ಸವದಲ್ಲಿ ಪಾಲ್ಗೊಂಡು ರಾಜ್ಯಕ್ಕೆ ಕೀರ್ತಿ ತರುವುದು ನಿಜವಲ್ಲವೆ; ಈವರೆಗೆ ರಾಜ್ಯದಿಂದ ಎಷ್ಟು ಕೆಡೆಟ್‌ಗಳು ದೆಹಲಿಯಲ್ಲಿ ಈ ಉತ್ಸವದಲ್ಲಿ ಪಾಲುಗೊಂಡಿದ್ದಾರೆ?

ಆ) ಈ ಕೆಡೆಟ್‌ಗಳು ರಾಜ್ಯಕ್ಕೆ ಕೀರ್ತಿ ತರುವ ದೃಷ್ಟಿಯಲ್ಲಿ ಶೈಕ್ಷಣಿಕ ವರ್ಷದಲ್ಲಿ ಹಿಂದುಳಿಯುವುದು ನಂತರ ಉದ್ಯೋಗ ದೊರಕುವಲ್ಲಿ ಹೊಡೆತ ಬೀಳುವುದು ನಿಜವಲ್ಲವೇ?

ಇ) ದೆಹಲಿ ಗಣರಾಜ್ಯೋತ್ಸವದಲ್ಲಿ ಭಾಗವಹಿಸಿದ ರಾಜ್ಯದ ಕೆಡೆಟ್‌ಗಳಿಗೆ ಸರ್ಕಾರ ಸರ್ಕಾರಿ ಸ್ವಾಮ್ಯದ ಕಂಪನಿಗಳಲ್ಲಿ ಉದ್ಯೋಗದಲ್ಲಿ ಮೀಸಲಾತಿ ನೀಡುವಲ್ಲಿ ಕ್ರಮ ಕೈಗೊಳ್ಳಲಾಗುವುದೇ?

ಈ) ಈ ಕೆಡೆಟುಗಳಿಗೆ ನೀಡುವ ವಿಶೇಷ ಆದ್ಯತೆಗಳು ಯಾವುವು?

ಶ್ರೀ ಎಸ್. ರಮೇಶ್ (ಯುವಜನ ಸೇವಾ, ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):-

ಅ) ಹೌದು. ೧೪೩೧ ಕೆಡೆಟ್‌ಗಳು ಗಣರಾಜ್ಯೋತ್ಸವದ ಅಂಗವಾಗಿ ದೆಹಲಿಯಲ್ಲಿ ನಡೆದ ಪೆರೇಡ್‌ನಲ್ಲಿ ಭಾಗವಹಿಸಿದ್ದರು.

ಆ) ಇಲ್ಲ.

ಇ) ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ವಿಶೇಷ ಆದ್ಯತೆಗಳು ಈ ಕೆಳಕಂಡಂತಿವೆ:- ೧) ಗಣರಾಜ್ಯೋತ್ಸವದಲ್ಲಿ ಪಾಲ್ಗೊಂಡು ಪ್ರಶಸ್ತಿ ಪಡೆದ ಈ ಕೆಡೆಟ್‌ಗಳಿಗೆ ತಲಾ ರೂ. ೧೦೦೦-೦೦ ಕೊಡಲಾಗುತ್ತಿದೆ (ಆದರೆ ೧೯೮೮ರಿಂದ ಈ ವಿಶೇಷ ಆದ್ಯತೆಯನ್ನು ನಿಲ್ಲಿಸಿದೆ). ೨) ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಕೋರ್ಸ್‌ಗಳಲ್ಲಿ ಸ್ಥಾನ ಮೀಸಲು; ಮತ್ತು ೩) ಕೆಲವು ಭದ್ರತಾ ಪಡೆಗಳಲ್ಲಿ ಆದ್ಯತೆ ಕೊಡಲಾಗುತ್ತಿದೆ.

ಕಾಡಾ ಮೀಟಿಂಗ್‌ನಲ್ಲಿ ನಿರ್ಣಯ ತೆಗೆದುಕೊಂಡ ಪ್ರಕಾರ ಮಲಪ್ರಭ ನೀರಿನಿಂದ ಏತ ನೀರಾವರಿ ಯೋಜನೆ

೧೪೩೨ (೨೨೧೫) ಶ್ರೀ ಶಿವಾನಂದ ಹಚ್. ಕೌಜಲಗಿ, (ಬೈಲಹೊಂಗಲ):- ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಕಾಡಾ ಮೀಟಿಂಗ್‌ನಲ್ಲಿ ನಿರ್ಣಯ ತೆಗದುಕೊಂಡ ಪ್ರಕಾರ ಬೆಳಗಾವಿ ಜಿಲ್ಲೆ ಸವದತ್ತಿ

ತಾಲ್ಲೂಕು ಪಣಗಿ ಮತ್ತು ಬೈಲಹೊಂಗಲ ತಾಲ್ಲೂಕಿನ ವಕ್ಕುಂದ ಗ್ರಾಮದ ಹತ್ತಿರ (ಮಲಪ್ರಭಾ ನೀರನ್ನು ಉಪಯೋಗಿಸಿ) ಏತ ನೀರಾವರಿ ಯೋಜನೆ (ಲಿಫ್ಟ್ ಇರಿಗೇಷನ್ ಸ್ಕೀಮ್) ತೆಗೆದುಕೊಳ್ಳಲು ಅಂದಾಜು ವೆಚ್ಚ ಪತ್ರಿಕೆಯನ್ನು ತಯಾರಿಸಲು ಮುಖ್ಯ ಇಂಜಿನಿಯರ್, ನೀರಾವರಿ ಇಲಾಖೆ, ಉತ್ತರ ವಲಯ, ಬೆಳಗಾವಿ ಇವರಿಗೆ ಆದೇಶ ನೀಡಿದ ಸಂಗತಿ ನಿಜವೇ?

ಆ) ಹಾಗಿದ್ದಲ್ಲಿ ಆದೇಶದ ಪ್ರಕಾರ ಅಂದಾಜು ವೆಚ್ಚ ಪತ್ರಿಕೆ ತಯಾರಿಸಲು ಮುಖ್ಯ ಇಂಜಿನಿಯರ್ ನೀರಾವರಿ ಇಲಾಖೆ, ಉತ್ತರ ವಲಯ, ಬೆಳಗಾವಿ ಇವರು ಯಾವ ಕ್ರಮ ಕೈಗೊಂಡಿರುವರು?

ಇ) ಈ ಅಂದಾಜು ವೆಚ್ಚ ಪತ್ರಿಕೆಯನ್ನು ಮುಖ್ಯ ಇಂಜಿನಿಯರ್, ನೀರಾವರಿ ಇಲಾಖೆ, ಉತ್ತರವಲಯ, ಬೆಳಗಾವಿ ಇವರು ಸರ್ಕಾರಕ್ಕೆ ಯಾವಾಗ ಕಳುಹಿಸಿ ಕೊಟ್ಟಿರುವರು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು):-

ಅ) ಕಾಡಾ ಸಭೆಯಲ್ಲಿ ಈ ವಿಷಯದ ಬಗ್ಗೆ ನಿರ್ಣಯ ತೆಗೆದುಕೊಂಡ ಕುರಿತು ನಡವಳಿಯಲ್ಲಿ ಪ್ರಸ್ತಾಪವಿರುವುದಿಲ್ಲ. ಆದಾಗ್ಯೂ, ಎಣಗಿ ಗ್ರಾಮದ ಜಮೀನುಗಳಿಗಾಗಿ ಪ್ರತ್ಯೇಕ ಏತ ನೀರಾವರಿ ಯೋಜನೆಯನ್ನು ಕಲ್ಪಿಸುವ ಬಗ್ಗೆ ಪರಿಶೀಲನೆ ಮಾಡಬೇಕೆಂದು ಮುಖ್ಯ ಇಂಜಿನಿಯರ್, ನೀರಾವರಿ ಉತ್ತರ ವಲಯ, ಬೆಳಗಾವಿ ಇವರಿಗೆ ಸೂಚನೆ ನೀಡಲಾಗಿದೆ.

ಆ) ಮೇಲೆ ತಿಳಿಸಿದ ಏತ ನೀರಾವರಿ ಯೋಜನೆಯ ಪ್ರಸ್ತಾವನೆಯು ಮುಖ್ಯ ಇಂಜಿನಿಯರ್‌ರವರ ಮಟ್ಟದಲ್ಲಿ ಪರಿಶೀಲನೆಯಲ್ಲಿರುತ್ತದೆ.

ಇ) ಉದ್ಭವಿಸುವುದಿಲ್ಲ.

ಮಲಪ್ರಭಾ ಯೋಜನೆಯಲ್ಲಿ ಮುಳುಗಡೆಯಾದ ಗ್ರಾಮಗಳ ಪುನರ್ವಸತಿ ಬಗ್ಗೆ

೧೪೩೩ (೨೨೧೮) ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):- ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಮಲಪ್ರಭಾ ಯೋಜನೆಯಲ್ಲಿ ಮುಳುಗಡೆಯಾದ ಪುನರ್ ವಸತಿ ಗ್ರಾಮವಾದ ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕ್ ಸುತಗಟ್ಟಿ ಗ್ರಾಮದಲ್ಲಿ ೭ ಕನ್ನಡ ಶಾಲಾ ಕೋಣೆಗಳನ್ನು ಪುನರ್ವಸತಿ ಕಾರ್ಯದಲ್ಲಿ ತೆಗೆದುಕೊಳ್ಳಲು ಸರ್ಕಾರ ಆಜ್ಞೆ ಮಾಡಿದ ಸಂಗತಿ ನಿಜವೇ?

ಆ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕ್ ಮಲಪ್ರಭಾ ಯೋಜನೆಯಲ್ಲಿ ಮುಳುಗಡೆಯಾದ ಪುನರ್‌ವಸತಿ ಕೇಂದ್ರವಾದ ವಕ್ಕುಂದ ಗ್ರಾಮದಲ್ಲಿ ೭ ಕನ್ನಡ ಶಾಲಾ ಕೋಣೆಗಳನ್ನು ಕಟ್ಟಲು ಆಜ್ಞೆ ಮಾಡಿದ ಸಂಗತಿ ನಿಜವೇ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು):-

ಅ) ಸುತಗಟ್ಟಿ ಪುನರ್ವಸತಿ ಗ್ರಾಮದಲ್ಲಿ ೭ ಶಾಲಾ ಕೋಣೆಗಳ ನಿರ್ಮಾಣವನ್ನು ಪುನರ್ವಸತಿ ಕಾರ್ಯಕ್ರಮದ ಅಡಿಯಲ್ಲಿ ತೆಗೆದುಕೊಳ್ಳಬಹುದೆಂದು ಮುಖ್ಯ ಇಂಜಿನಿಯರ್‌ರವರಿಗೆ ಸೂಚಿಸಲಾಗಿದೆ.

ಆ) ವಕ್ಕುಂದ ಪುನರ್ವಸತಿ ಗ್ರಾಮದಲ್ಲಿ ೭ ಶಾಲಾ ಕೋಣೆಗಳ ನಿರ್ಮಾಣವನ್ನು ಪುನರ್ವಸತಿ ಕಾರ್ಯಕ್ರಮದ ಅಡಿಯಲ್ಲಿ ತೆಗೆದುಕೊಳ್ಳಬಹುದೆಂದು ಮುಖ್ಯ ಇಂಜಿನಿಯರ್‌ರವರಿಗೆ ಸೂಚಿಸಲಾಗಿದೆ.